**ಓ.ಎಸ್. ನಂಃ 342/2019**

**ಪಿ.ಡಬ್ಲ್ಯೂಃ 1**

**ದಿನಾಂಕ 06.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಎನ್.ಎಸ್. ವಕೀಲರಿಂದಃ**

6. ನಿಪಿ.9 ರ ದಾಖಲೆಯು ಈ ಹಿಂದೆ ಪ್ರತಿವಾದಿಯರು ಹೂಡಿದ್ದ ಪಾಲು ದಾವೆಯ ವಾದ ಪತ್ರ ಎಂದರೆ ಸರಿ. ನಿಪಿ.11 ರ ದಾಖಲೆಯು ಪ್ರತಿವಾದಿಯರ ಪರ ಆದ ತೀರ್ಪು ಎಂದರೆ ಸರಿ. ಅಸಲು ದಾವೆ ಸಂಖ್ಯೆ 309/2018 ರ ದಾವೆಯಲ್ಲಿ ಆದ ತೀರ್ಪಿನ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಂದೆಯ ತಂದೆ ಅಂದರೆ ನನ್ನ ತಾತನಾದ ಮಲ್ಲೇಗೌಡರಿಂದ ಬಂದ ಆಸ್ತಿ ಎಂದರೆ ಸರಿ. ನನ್ನ ತಾತನ ಆಸ್ತಿಗಳನ್ನು ಪ್ರತಿವಾದಿಯರಿಗೆ ಕೊಡದೇ ಕೇವಲ ನನ್ನ ಹೆಸರಿನಲ್ಲಿ ಮಾತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ಅಸಲು ದಾವೆ ಸಂಖ್ಯೆ 309/2018 ರ ದಾವೆಯಲ್ಲಿ ತೀರ್ಪು ಆಗಿರುತ್ತದೆ ಎಂದರೆ ಸರಿಯಲ್ಲ. ಹಿಂದಿನಿಂದಲೂ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**